# ಸಂಖ್ಯೆ ಏರಿದೆ, ಗುಣಮಟ್ಟ ಎಲ್ಲಿದೆ?

ವಿಶ್ವವಿದ್ಯಾನಿಲಯಗಳು ಉನ್ನತ ಶಿಕ್ಷಣ ನೀಡುವ ಸ್ವಾಯತ್ತ ಸಂಸ್ಥೆಗಳು. ಆದರೆ ಅವುಗಳಿಗೆ ವೆಚ್ಚವಾಗುವ ಹಣ ಜನಸಾಮಾನ್ಯರದು. ಆದ್ದರಿಂದಲೇ ಕುವೆಂಪು ಅವರಂಥ ದಾರ್ಶನಿಕ ವ್ಯಕ್ತಿತ್ವದ ಕುಲಪತಿಗಳು ಜನಸಾಮಾನ್ಯರಿಗೆ ಉನ್ನತ ಶಿಕ್ಷಣದ ಲಾಭ ಸಿಗುವಂಥ ಪ್ರಚಾರ ಉಪನ್ಯಾಸ ಮಾಲೆಗಳು ಜನಪ್ರಿಯವಾಗುವಂತೆ ನೋಡಿಕೊಂಡರು. ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರ ಉಪನ್ಯಾಸಗಳು ಹಳ್ಳಿ ಹಳ್ಳಿಗಳಲ್ಲಿ ನಡೆಯುವಂತೆ ಮತ್ತು ಆ ಉಪನ್ಯಾಸಗಳನ್ನು ಆಧರಿಸಿದ ಕಿರು ಹೊತ್ತಿಗೆಗಳು ಅತ್ಯಂತ ಕಡಿಮೆ ದರದಲ್ಲಿ ಜನಸಾಮಾನ್ಯರಿಗೆ ಸಿಗುವಂತೆ ವ್ಯವಸ್ಥೆ ಆಗಿರುವುದರ ಹಿಂದೆ ಹೀಗೆ ಜನತೆಯ ಋಣವನ್ನು ಸಂದಾಯ ಮಾಡುವ ಕೃತಜ್ಞತಾ ಭಾವವೇ ಇತ್ತು.

ವಿಶ್ವವಿದ್ಯಾನಿಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಷ್ಟು ಅಷ್ಟರಮಟ್ಟಿಗೆ ಉನ್ನತ ಜ್ಞಾನ ಜನಸಾಮಾನ್ಯರಿಗೆ ಸಿಗುತ್ತದೆ ಎಂಬ ನಿರೀಕ್ಷೆ ಈಚಿನ ವರ್ಷಗಳಲ್ಲಿ ಹುಸಿಯಾಗುತ್ತಿದೆ. ಪ್ರಾದೇಶಿಕ ಪ್ರಾತಿನಿಧ್ಯ ಮತ್ತು ಕಲಿಕೆಯ ಶಾಸ್ತ್ರ ವಿಷಯಗಳಿಗೆ ಅನುಗುಣವಾಗಿ ಸ್ಥಾಪನೆ ಆಗುತ್ತಿರುವ ವಿಶ್ವವಿದ್ಯಾನಿಲಯಗಳ ಸಂಖ್ಯಾಬಾಹುಳ್ಯ ಹೆಚ್ಚುತ್ತಿದೆ. ಜಿಲ್ಲೆಗೊಂದು ವಿಶ್ವವಿದ್ಯಾನಿಲಯ ಎಂಬುದು ರಾಜಕೀಯ ಘೋಷಣೆಯಾಗಿಯಷ್ಟೇ ಉಳಿಯದೆ ವಾಸ್ತವವೂ ಆಗುವ ಸೂಚನೆಗಳಿವೆ. ಆದರೆ, ಸಾಮಾಜಿಕ ಬದುಕಿನ ಎಲ್ಲ ಸಂಘ ಸಂಸ್ಥೆಗಳನ್ನು ವ್ಯಾಪಿಸಿದ ಮೌಲ್ಯರಾಹಿತ್ಯ ಉನ್ನತ ಶಿಕ್ಷಣ ಪ್ರಚಾರದ ವಿಶ್ವವಿದ್ಯಾನಿಲಯಗಳನ್ನೂ ಬಿಟ್ಟಿಲ್ಲ ಎಂಬುದಕ್ಕೆ ವಿಪುಲ ನಿದರ್ಶನಗಳು ಬಯಲಾಗುತ್ತಿವೆ. ಕುಲಪತಿಯಂಥ ಹುದ್ದೆಗಳಿಗೆ ವಿದ್ವತ್ತು, ಬೋಧನೆ ಮತ್ತು ಸಂಶೋಧನೆಯ ಅನುಭವ, ಪ್ರತಿಭೆಗಳಿಗಿಂತ ಜಾತಿ, ರಾಜಕೀಯ ಒಲವು, ಹಣ ಬಲ ಮೊದಲಾದ ಅಂಶಗಳು ಪ್ರಧಾನವಾಗುತ್ತಿವೆ. ಎಲ್ಲ ಕಡೆ ಬೇರು ಬಿಟ್ಟಿರುವ ಭ್ರಷ್ಟಾಚಾರದ ಪೆಡಂಭೂತ ವಿಶ್ವವಿದ್ಯಾನಿಲಯಗಳನ್ನೂ ಆವರಿಸಿದೆ. ಮೂರು ನಾಲ್ಕು ವರ್ಷಗಳ ಅಧಿಕಾರದ ಅವಧಿಯಲ್ಲಿ ಉನ್ನತ ಶಿಕ್ಷಣದ ಮೌಲ್ಯಗಳನ್ನು ಬಲಪಡಿಸುವಂಥ ವಿಧಾಯಕ ಕಾರ್ಯಯೋಜನೆಗಳಿಗಿಂತ ಕಟ್ಟಡ ನಿರ್ಮಾಣ, ಸಿಬ್ಬಂದಿ ನೇಮಕದಂತಹ ಆಡಳಿತ ನಿರ್ವಹಣೆಯ ಕೆಲಸಗಳತ್ತ ಆದ್ಯತೆಗಳು ಮುಖ್ಯವಾಗಿ ಬಿಡುತ್ತವೆ.

ಜಾಗತೀಕರಣ ಪ್ರಕ್ರಿಯೆ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಬಲ ತುಂಬ ಬೇಕು. ತೀವ್ರ ಸ್ಪರ್ಧೆಯ ಈ ದಿನಗಳಲ್ಲಿ ಬಲ ಇದ್ದವರಷ್ಟೇ ಉಳಿದುಕೊಳ್ಳುತ್ತಾರೆ. ಸತ್ವ, ಸಾಮರ್ಥ್ಯ ಇದ್ದ ಉನ್ನತ ಶಿಕ್ಷಣ ಸಂಸ್ಥೆಗಳು ರಾಜ್ಯದಲ್ಲಿ ಮಾತ್ರವಲ್ಲ, ವಿಶ್ವ ಮಟ್ಟದಲ್ಲಿಯೂ ತಮ್ಮ ಛಾಪನ್ನು ಮೂಡಿಸುವ ಅವಕಾಶವನ್ನು ಜಾಗತೀಕರಣ ಪ್ರಕ್ರಿಯೆ ತೆರೆದಿದೆ. ಖಾಸಗಿ ಬಂಡವಾಳ ಕೂಡ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಹರಿದು ಬಂದು ಜ್ಞಾನ ಪ್ರಸಾರ ಪೈಪೋಟಿಯ ಸ್ಪರ್ಧಾಕಣದ ಸರಕಾಗಿದೆ. ಉನ್ನತ ಶಿಕ್ಷಣದ ಗುಣಮಟ್ಟ ಉಳಿಸಿಕೊಳ್ಳುವುದು ಶ್ರೇಷ್ಠ ಪರಂಪರೆಯ ಸಂಸ್ಥೆಗಳಿಗೆ ಸವಾಲು. ಹಿಂದಿನ ವೈಭವಗಳಿಗೆ ಇಂದು ಪರಿಶ್ರಮವಿದ್ದಾಗಲೇ ಮೆರಗು ಬರುತ್ತದೆ. ಜಾಗತಿಕವಾಗಿ ತೀವ್ರ ಪೈಪೋಟಿಯನ್ನು ಎದುರಿಸಬೇಕಾದರೆ ಅದು ಜ್ಞಾನದಿಂದಷ್ಟೇ ಸಾಧ್ಯವೆಂಬುದೇ ಉನ್ನತ ಶಿಕ್ಷಣದ ಮಹತ್ವವನ್ನು ಸಾರುವ ಅಂಶ.

ದುರದೃಷ್ಟವೆಂದರೆ ಕರ್ನಾಟಕದ ಬಹುತೇಕ ಎಲ್ಲ ಹೊಸ ವಿಶ್ವವಿದ್ಯಾನಿಲಯಗಳೂ ಒಂದಲ್ಲ ಒಂದು ಕಳಂಕಗಳನ್ನು ಅಂಟಿಸಿಕೊಂಡಿವೆ. ಎಲ್ಲ ರೀತಿಯ ಹುದ್ದೆಗಳಿಗೆ ನೇಮಕಗಳು ಮತ್ತು ಕಟ್ಟಡಗಳ ನಿರ್ಮಾಣದಂತಹ ಆಡಳಿತಾತ್ಮಕ ಕ್ರಮಗಳು ವಿವಾದ ಸೃಷ್ಟಿಸುತ್ತಿವೆ. ಅಕ್ರಮ ವ್ಯವಹಾರದ ಕೂಪಗಳಾಗುತ್ತಿವೆ. ಸಂಶೋಧನೆ, ಸಾಧನೆಗಳಿಗೆ ಸುದ್ದಿಯಾಗಬೇಕಾದ ಕಡೆ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಕ್ರಮ ನಡವಳಿಕೆಗಳು ಪ್ರಚಾರದ ಮುಂಚೂಣಿಗೆ ಬರುತ್ತಿವೆ. ಸ್ವಾಯತ್ತ ಸಂಸ್ಥೆಗಳಾದರೂ ಕೆಲವು ಅಂಶಗಳಿಗೆ ಸರ್ಕಾರವನ್ನು ಅವಲಂಬಿಸಿಬೇಕಾದ ವಿಶ್ವವಿದ್ಯಾನಿಲಯಗಳು ಶೈಕ್ಷಣಿಕ ಉನ್ನತಿಯನ್ನು ಕಾಯ್ದುಕೊಳ್ಳುವುದರಲ್ಲಿ ಸಫಲವಾಗುತ್ತಿಲ್ಲ. ಇದು ಜನಸಾಮಾನ್ಯರ ತೆರಿಗೆ ಹಣಕ್ಕೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿರುವ ಸುಶಿಕ್ಷಿತ ವರ್ಗ ಎಸಗುತ್ತಿರುವ ದ್ರೋಹ. ಇದಕ್ಕೆ ಸರ್ಕಾರ ನಡೆಸುತ್ತಿರುವವರೂ, ಸರ್ಕಾರದ ಕಿವಿ ಹಿಂಡಿ ಅದು ಸರಿದಾರಿಯಲ್ಲಿ ನಡೆಯುವಂತೆ ಮಾರ್ಗ ತೋರುವ ಜನಪ್ರತಿನಿಧಿಗಳೂ ಕಾರಣ ಎಂಬುದು ಸ್ಪಷ್ಟ. ಇದರಲ್ಲಿ ವಿಫಲವಾದರೆ ಅದು ಜನತೆಗೆ ಮಾಡುವ ಮೋಸ.

ವಿಶ್ವವಿದ್ಯಾನಿಲಯಗಳದು ಜ್ಞಾನ ಪ್ರಸಾರದ ಹೊಣೆ. ಅವು ಆಧುನಿಕ ಗುರುಕುಲಗಳಂತೆ ಪವಿತ್ರ ಕ್ಷೇತ್ರಗಳು. ಅವನ್ನು ನಿರ್ವಹಿಸುತ್ತಿರುವವರು ಅವುಗಳ ಪಾವಿತ್ರ್ಯವನ್ನು ಸಂರಕ್ಷಿಸುವಂತೆ ನಡೆದುಕೊಳ್ಳಬೇಕು. ಅದು ಸಾಧ್ಯವಾಗದಿದ್ದರೆ ಹಾಗೆ ಮಾಡಬಲ್ಲವರಿಗಾಗಿ ಬಿಟ್ಟುಕೊಟ್ಟು ನಿರ್ಗಮಿಸಬೇಕು. ಇದು ಸುಶಿಕ್ಷಿತರಿಂದ ನಾಗರಿಕ ಸಮಾಜ ನಿರೀಕ್ಷಿಸುವ ಕನಿಷ್ಠ ನಡವಳಿಕೆ.

■ ಲಕ್ಷ್ಮಣ ಕೊಡಸೆ

ದುರದೃಷ್ಟವೆಂದರೆ ಕರ್ನಾಟಕದ ಬಹುತೇಕ ಎಲ್ಲ ಹೊಸ ವಿಶ್ವವಿದ್ಯಾನಿಲಯಗಳೂ ಒಂದಲ್ಲ ಒಂದು ಕಳಂಕಗಳನ್ನು ಅಂಟಿಸಿಕೊಂಡಿವೆ. ಎಲ್ಲ ರೀತಿಯ ಹುದ್ದೆಗಳಿಗೆ ನೇಮಕಗಳು ಮತ್ತು ಕಟ್ಟಡಗಳ ನಿರ್ಮಾಣದಂತಹ ಆಡಳಿತಾತ್ಮಕ ಕ್ರಮಗಳು ವಿವಾದ ಸೃಷ್ಟಿಸುತ್ತಿವೆ. ಅಕ್ರಮ ವ್ಯವಹಾರದ ಕೂಪಗಳಾಗುತ್ತಿವೆ. ಸಂಶೋಧನೆ, ಸಾಧನೆಗಳಿಗೆ ಸುದ್ದಿಯಾಗಬೇಕಾದ ಕಡೆ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಕ್ರಮ ನಡವಳಿಕೆಗಳು ಪ್ರಚಾರದ ಮುಂಚೂಣಿಗೆ ಬರುತ್ತಿವೆ.

